<u>ದಿ:**15.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ Sri.L.U.,ವಕೀಲರಿಂದ:-

ನಾನು ನಡೆಸುತ್ತಿರುವ ಭುವನೇಶ್ವರಿ ಎಂಟರ್ ಪ್ರೈಸಸ್ ಅಂಗಡಿಯ ಪರವಾನಗಿ ನಮ್ಮ ಬಳಿ ಇರುತ್ತದೆ. ಸದರಿ ಭುವನೇಶ್ವರಿ ಎಂಟರ್ ಪ್ರೈಸಸ್ ಅಂಗಡಿ ನನ್ನ ಹೆಸರಿಗೆ ಸ್ವಂತ ಇರುತ್ತದೆ. ಸದರಿ ಅಂಗಡಿಯ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇರುವುದಿಲ್ಲ. ನಮ್ಮ ಅಂಗಡಿಯಲ್ಲಿ ಮನೆ ಕಟ್ಟಲು ಸೆಂಟರಿಂಗ್ ಸೀಟ್‌ಗಳನ್ನು ಬಾಡಿಗೆಗೆ ನೀಡುತ್ತಿದ್ದೇವು ಎಂದರೆ ಸರಿ. ಆರೋಪಿಯು ಸೆಂಟರಿಂಗ್ ಬಳಸಿ ಮನೆ ಕಟ್ಟುತ್ತಿದ್ದರು ಎಂದರೆ ಸರಿ. ಅವರು ಮನೆ ಕಟ್ಟುವ ಸೆಂಟರಿಂಗ್ ಕೆಲಸದ ಲೇಬರ್ ಕಾಂಟ್ರ್ಯಾಕ್ಟ ಇರುತ್ತಾರೆ ಎಂದರೆ ಸರಿ. ಸದರಿ ಕೆಲಸಗಳಿಗೆ ಆರೋಪಿಯ ಬಳಿ ಟಾಟಾ ಏಸ್ ಗೂಡ್ಸ್ ಗಾಡಿ ಇತ್ತು ಎಂದರೆ ಸರಿ. ಸದರಿ ಗಾಡಿಯನ್ನು ಆರೋಪಿಯು 2017 ರಲ್ಲಿ ಬಜಾಜ್ ಪೈನಾನ್ಸ್ ಲೋನ್ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿಯು ನಮ್ಮ ಅಂಗಡಿಯಿಂದ ಕಬ್ಬಿಣ, ಸಿಮೆಂಟ್, ಎಂಸ್ಯಾಂಡ್, ಜಲ್ಲಿ ಮತ್ತು ಒಂದು ಮನೆ ಕಟ್ಟಲು ಯಾವ ವಸ್ತುಗಳು ಅವಶ್ಯಕತೆ ಇದೆಯೋ ಎಲ್ಲಾ ವಸ್ತುಗಳನ್ನು ನಮ್ಮ ಅಂಗಡಿಯಿಂದ ಖರೀದಿ ಮಾಡಿರುತ್ತಾರೆ. ಸಾಮಾನ್ಯವಾಗಿ ನಾವು ಎಲ್ಲಾ ಜನರಿಗೂ ಹಣ ಪಡೆದುಕೊಂಡು ವಸ್ತುಗಳನ್ನು ಮಾರಾಟ ಮಾಡುತ್ತೇವೆ ಎಂದರೆ ಸಾಕ್ಷಿ ಪರಿಚಯಸ್ಥರಿಗೆ ಸಾಲವಾಗಿ ನೀಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಅಂಗಡಿಯಲ್ಲಿ ವಸ್ತುಗಳನ್ನು ಖರೀದಿ ಮಾಡುವವರಿಗೆ ಬಿಲ್‌ಗಳನ್ನು ನೀಡುತ್ತೇವೆ. ನಾವು ಗ್ರಾಹಕರಿಗೆ ಸಾಲವಾಗಿ ನೀಡಿದ್ದನ್ನು ನಮ್ಮ ಅಂಗಡಿಯ ಲೆಡ್ಜರ್ ಮತ್ತು ಬಿಲ್‌ಗಳನ್ನು ನೀಡುತ್ತೇವೆ. ಆರೋಪಿಗೆ ಯಾವ ದಿನಾಂಕದಂದು ಯಾವ ದಿನಾಂಕದಂದು ಮೇಲೆ ಹೇಳಿದ ಸದರಿ ವಸ್ತುಗಳನ್ನು ಅಂಗಡಿಯ ಲೆಡ್ಜರ್ ನಲ್ಲಿ ನಮೂದು ಮಾಡಿರುತ್ತೇವೆ. ಸದರಿ ಲೆಡ್ಜರ್ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಮುಂದಿನ ಮುದ್ದತ್ತಿಗೆ ನಾನು ಸದರಿ ಲೆಡ್ಜರ್ ಪುಸ್ತಕಗಳನ್ನು ಹಾಜರುಪಡಿಸುತ್ತೇನೆ. ನಾನು ಕಳುಹಿಸಿದ ನೋಟೀಸು ಆರೋಪಿಗೆ ಯಾರ ಮೂಲಕ ತಲುಪಿದೆ ತಿಳಿದುಕೊಂಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ**5** ರಲ್ಲಿ ಅಂಚೆ ಸ್ವೀಕೃತಿಯಲ್ಲಿ ಜಾನಕಿ ಎಂದು ಸಹಿ ಮಾಡಿರುವುದು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ**1** ರಲ್ಲಿ

**02** ಸಹಿಗಳು ಇರುತ್ತವೆ ಎಂದರೆ ಸರಿಯಲ್ಲ**.** ನಿಪಿ**1** ರಲ್ಲಿ **02** ಸಹಿಗಳು ಇರುತ್ತವೆ ಈ ಬಗ್ಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ**1** ಚೆಕ್ ಆರೋಪಿಯ ಖಾತೆ ಮುಚ್ಚಿರುವುದಾಗಿ ವಾಪಾಸ್ಸಾಗಿರುತ್ತದೆ**.** ಆರೋಪಿಯ ಖಾತೆ ಯಾವ ವರ್ಷದಲ್ಲಿ ನಾವು ವಿಚಾರಣೆ ಮಾಡಿರುವುದಿಲ್ಲ**.**

(ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು**,** ಜಗಳೂರು